ದಿನಾಂಕ 24-02-2018 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸಿರುತ್ತಾರೆ.

ಸಾಕ್ಷಿಯನ್ನು ಪಿ.ಡಬ್ಲ್ಯೂ.-1 ಎಂದು ವಿಚಾರಣೆ ಮಾಡಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಆರ್.ಡಿ.ಆರ್. ವಕೀಲರಿಂದ.

ದಿನಾಂಕ 25.01.2011 ರ ನೊಂದಾಯಿತ ಕ್ರಯ ಪತ್ರದ ಮೂಲ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ನಿ.ಪಿ. 1, ಸರ್ವೆ ನಂ 149/7 ರ ಪಹಣಿ ಪತ್ರಿಕೆಯನ್ನು ನಿ.ಪಿ. 2, ಎಮ್.ಆರ್. ಸಂಖ್ಯೆ 24/2010-11 ರ ದೃಢೀಕೃತ ಪ್ರತಿಯನ್ನು ನಿ.ಪಿ. 3, ಸರ್ವೆ ನಂಬರ್ 149 ಕ್ಕೆ ಸಂಬಂಧಿಸಿದ ಪಕ್ಕಾ ಬುಕ್ ದೃಢೀಕೃತ ಪ್ರತಿಯನ್ನು ನಿ.ಪಿ. 4, ಸರ್ವೆ ನಂಬರ್ 149/4 ಕ್ಕೆ ಸಂಬಂಧಿಸಿದ ಪಕ್ಕಾ ಬುಕ್ ದೃಢೀಕೃತ ಪ್ರತಿಯನ್ನು ನಿ.ಪಿ. 5, ಸರ್ವೆ ನಂಬರ್ 149/4 ಕ್ಕೆ ಸಂಬಂಧಿಸಿದ ಇನ್ನೊಂದು ಪಕ್ಕಾ ಬುಕ್ ದೃಢೀಕೃತ ಪ್ರತಿಯನ್ನು ನಿ.ಪಿ. 6, ಎಮ್.ಆರ್. ಸಂಖ್ಯೆ 8/1999-2000 ರ ದೃಢೀಕೃತ ಪ್ರತಿಯನ್ನು ನಿ.ಪಿ. 7, ಅಸಲು ದಾವಾ ಸಂಖ್ಯೆ 63/98 ರಲ್ಲಿನ ಆದೇಶ ಪುಟಗಳ ದೃಢೀಕೃತ ಪ್ರತಿಯನ್ನು ನಿ.ಪಿ. 8 ಹಾಗೂ ಸದರಿ ದಾವೆಯಲ್ಲಿರುವ ವಾದ ಪತ್ರವನ್ನು ನಿ.ಪಿ. 9 ಮತ್ತು ಅದರಲ್ಲಿ ವಾದಿ ಪ್ರತಿವಾದಿಯರು ಹಾಜರು ಪಡಿಸಿದ್ದ ರಾಜಿ ಅರ್ಜಿಯನ್ನು ನಿ.ಪಿ. 10, ದಿನಾಂಕ 18.01.2011 ರ ನೊಂದಾಯಿತ ಕ್ರಯ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ. 11, ಎಮ್.ಆರ್. ಸಂಖ್ಯೆ 16/2002-03 ರ ಹಾಗೂ 21/2008-09, 6/2004-05 ಗಳ ದೃಢೀಕೃತ ಪ್ರತಿಗಳನ್ನು ಕ್ರಮವಾಗಿ ನಿ.ಪಿ. 12 ರಿಂದ 14, ಕಟ್ಟಡದ ನಕಾಶೆಯ ದೃಢೀಕೃತ ಪ್ರತಿಯನ್ನು ನಿ.ಪಿ. 13, ಸರ್ವೆ ನಂಬರ್ 149/8 ರ ತೆರಿಗೆ ಬೇಡಿಕೆಯ ಪ್ರತಿಯನ್ನು ನಿ.ಪಿ. 14, ದಿನಾಂಕ 05.06.2015 ರ ಕಟ್ಟಡ ಪರವಾನಿಗೆಯ ಪ್ರತಿಯನ್ನು ನಿ.ಪಿ. 15, 3 ಛಾಯಾ ಚಿತ್ರಗಳನ್ನು ಕ್ರಮವಾಗಿ ನಿಪಿ. 16 ರಿಂದ 18 ಮತ್ತು ಒಂದು ಸಿ.ಡಿಯನ್ನು ನಿ.ಪಿ. 19 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.